ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆ

ಕರ್ನಾಟಕ ವಿಧಾನ ಪರಿಷತ್ತು

ನೂರ ನಲವತ್ತೆರಡನೆಯ ಅಧಿವೇಶನ

ಮಂಗಳವಾರ, ದಿನಾಂಕ : 08 ನೇ ಡಿಸೆಂಬರ್, 2020

ಕೃಷಿ ಮಾರಾಟ ಇಲಾಖೆಯಲ್ಲಿ ಆವರ್ತ ನಿಧಿಯ ಬಗ್ಗೆ

ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ (ಶಿಕ್ಷಕರ ಕ್ಷೇತ್ರ):-

103 (157) ಮಾನ್ಯ ಸಹಕಾರ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಆವರ್ತ ನಿಧಿ ಎಂದರೇನು ; ಕೃಷಿ ಮಾರಾಟ ಇಲಾಖೆಯಲ್ಲಿ ಆವರ್ತ ನಿಧಿ ಹಾಗೂ ಇತರೆ ನಿಧಿಗಳನ್ನು ಸರ್ಕಾರ ಸ್ಥಾಪಿಸಿದೆಯೇ; ಸ್ಥಾಪಿಸಿದ್ದರೆ, ಯಾವ ಯಾವ ನಿಧಿಗಳನ್ನು ಯಾವ ಯಾವ ಉದ್ದೇಶಗಳಿಗಾಗಿ ಮತ್ತು ಯಾರು ಯಾರಿಗೆ ಸ್ಥಾಪನೆ ಮಾಡಲಾಗಿದೆ ; (ವಿವರವಾದ ಮಾಹಿತಿ ಒದಗಿಸುವುದು)

(ಆ) ಸದರಿ ನಿಧಿಗಳಿಂದ ಹಣವನ್ನು ಪಡೆದ ಏಜೆನ್ಸಿಗಳು, ಉದ್ಯಮಿಗಳು, ವ್ಯಾಪಾರಗಾರರು, ರೈತರು ಹಾಗೂ ಇತರರು ಯಾರು ಯಾರು; ಯಾವ ವರ್ಷಗಳಲ್ಲಿ ಎಷ್ಟು ಹಣವನ್ನು ಯಾವ ಉದ್ದೇಶಕ್ಕಾಗಿ ಪಡೆದುಕೊಂಡಿದ್ದಾರೆ ; (ವಿವರವಾದ ಮಾಹಿತಿ ಒದಗಿಸುವುದು)

(ಇ) ಸದರಿ ನಿಧಿಗಳಿಂದ ಹಣವನ್ನು ಪಡೆಯಲು ಇರುವ ಮಾರ್ಗಸೂಚಿಗಳೇನು ; ಯಾರು ಯಾರು ಪಡೆಯಬಹುದು; (ವಿವರವಾದ ಮಾಹಿತಿ ಒದಗಿಸುವುದು)

(ಈ) ಸದರಿ ಆವರ್ತ ಹಾಗೂ ಇತರೆ ನಿಧಿಗಳಲ್ಲಿ ಪಡೆದುಕೊಂಡ ಹಣವನ್ನು ಉದ್ದಿಮೆದಾರರು ಹಾಗೂ ಇತರರು ಸರಿಯಾಗಿ ಪಾವತಿ ಮಾಡಿದ್ದಾರೆಯೇ ; ಮಾಡಿಲ್ಲವಾದರೆ ಬಾಕಿ ಇರುವ ಹಣ ಎಷ್ಟು ; (ವಿವರವಾದ ಮಾಹಿತಿ ಒದಗಿಸುವುದು)

(ಉ) ಈ ಸಂಬಂಧ ಸರ್ಕಾರ ಕೈಗೊಂಡ ಕ್ರಮಗಳೇನು ?